D) If so, whether action is being taken by the Government to convert these agricultural camps into Revenue village.

Sri. H.C. Srikantaiah (Revenue Minister)

A) Total Number of Agriculture Camps in Uttar Karnataka Areas -316

B) Total population - 1,66,763

C) Only one representation has been received from the Karnataka Kamma Sangha, Bangalore in this regard.

D) After receipt of report from the Deputy Commissioners it will be examined.

ಕಾಡುಗಳ್ಳ ವೀರಪ್ಪನ್ ಕಾರ್ಯಾಚರಣೆ

378 (750) ಶ್ರೀ ಎನ್. ಸಂಪಂಗಿ (ಬಾಗೇಪಲ್ಲಿ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಂತಜೋರ ಕಾಡುಗಳ್ಳ ವೀರಪ್ಪನ್ ಕಾರ್ಯಾಚರಣೆ ಸರ್ಕಾರವು ಇದುವರೆವಿಗೂ ವ್ಯಯ ಮಾಡಿರುವ ವೆಚ್ಚವೆಷ್ಟು;

ಆ) ಕಾಡುಗಳ್ಳ ವೀರಪ್ಪನ್ನು ಬಂಧಿಸುವ ನೆಪದಲ್ಲಿ ಆರಕ್ಷಕ ಅಧಿಕಾರಿಗಳು ಮುಗ್ಧ ಜನತೆಯನ್ನು ಬಂಧಿಸಿ; ಮಹಿಳೆಯರ ಮೇಲೆ ಅತ್ಯಾಚಾರವೆಸಗಿ, ವೀರಪ್ಪನ್ ಹೆಸರಿನಲ್ಲಿ ಅನ್ಯಾಯವೆಸಗುತ್ತಿರುವುದು ನಿಜವಲ್ಲವೇ; ಇಂತಹ ಅಧಿಕಾರಿಗಳ ಮೇಲೆ ಸರ್ಕಾರವು ಕೈಗೊಂಡಿರುವ ಕ್ರಮವೇನು?

ಇ) ವೀರಪ್ಪನ್ ನಿಜವಾಗಿಯೂ ಬದುಕಿರುವ ಬಗ್ಗೆ ಸರ್ಕಾರಕ್ಕೆ ಸ್ಪಷ್ಟ ಮಾಹಿತಿ ಇದೆಯೇ ಮಾಹಿತಿ ಒದಗಿಸುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು)

ಅ) 1997ನೇ ಸಾಲಿನಿಂದ 2001ರ ಅಂತ್ಯದವರೆಗೆ ಮಾಡಲಾಗಿರುವ ಅಂದಾಜು ವೆಚ್ಚ ರೂ. 24,90,18,749ಗಳು

ಆ) ಕಾಡುಗಳ್ಳ ವೀರಪ್ಪನ್‌ನನ್ನು ಬಂಧಿಸುವ ನೆಪದಲ್ಲಿ ಆರಕ್ಷಕ ಅಧಿಕಾರಿಗಳು ಮುಗ್ಧ ಜನತೆಯನ್ನು ಬಂಧಿಸಿ ಮಹಿಳೆಯರ ಮೇಲೆ ಅತ್ಯಾಚಾರವೆಸಗಿ ಅನ್ಯಾಯವನ್ನು ಎಸಗಿರುವುದಿಲ್ಲ. ಇದುವರೆವಿಗೆ ಮಾಡಿರುವ ಬಂಧನಗಳೆಲ್ಲವೂ ಕಾನೂನು ರೀತ್ಯ ಆಗಿರುತ್ತದೆ ಹಾಗೂ ಎಲ್ಲ ಕ್ರಮಗಳನ್ನು ಕಾನೂನು ಬದ್ಧವಾಗಿಯೇ ಕೈಗೊಳ್ಳಲಾಗಿದೆ. ಆದಾಗ್ಯೂ ತೊಂದರೆಗೊಳಗಾದವರೆಂದು ಹೇಳಲಾದ ಜನರು ನೀಡಿರುವ ದೂರುಗಳ ಬಗ್ಗೆ ವಿಚಾರಣೆಯನ್ನು ನಡೆಸುವ ಸಲುವಾಗಿ ಗೌರವಾನ್ವಿತ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು ರಚಿಸಿರುವ ಬೆಂಗಳೂರಿನಲ್ಲಿರುವ ನಿಯೋಗವು (ಪ್ಯಾನಲ್) ಸದರಿ ದೂರುಗಳ ಬಗ್ಗೆ ವಿಚಾರಣೆಯನ್ನು ನಡೆಸುತ್ತಿದೆ. ಆದರೆ ಈ ನಿಯೋಗದ ಮುಂದೆ ಇರುವ ದೂರುಗಳೆಲ್ಲ 1993 ರಿಂದ 1996ರ ವರೆಗಿನ ಅವಧಿಗೆ ಸಂಬಂಧಪಟ್ಟವುಗಳಾಗಿರುತ್ತವೆ.

ಇ) ಲಭ್ಯವಿರುವ ಮಾಹಿತಿಗಳ ಪ್ರಕಾರ ದಂತಚೋರ ವೀರಪ್ಪನ್ ಬದುಕಿರುತ್ತಾನೆ. ಪೊಲೀಸ್‌ರಿಂದ ದಸ್ತಗಿರಿಯಾಗುವುದನ್ನು ತಪ್ಪಿಸಿಕೊಳ್ಳುವ ಸಲುವಾಗಿ ಆತ ಕರ್ನಾಟಕ ಮತ್ತು ತಮಿಳುನಾಡಿನ ದಟ್ಟ ಅರಣ್ಯಗಳಲ್ಲಿ ಅಡಗಿಕೊಂಡಿರುತ್ತಾನೆ. ಕರ್ನಾಟಕ ಮತ್ತು ತಮಿಳುನಾಡು

ಕಾರ್ಯಾಚರಣೆ ಪಡೆಗಳು ಆತನನ್ನು ದಸ್ತಗಿರಿ ಮಾಡಲು ಶಕ್ತಿ ಮೀರಿ ಶೋಧನಾ ಕಾರ್ಯಗಳನ್ನು ನಡೆಸುತ್ತಿವೆ.

ಅಕ್ಕಮಹಾದೇವಿ ಮಹಿಳಾ ಪದವಿಪೂರ್ವ ಕಾಲೇಜು ಕಟ್ಟಡವನ್ನು ಆಸ್ಪತ್ರೆ ಕಟ್ಟಲು ನೀಡಿರುವುದು

522 (896) ಶ್ರೀ ಪ್ರಕಾಶ್ ಖಂಡ್ರೆ (ಭಾಲ್ಕಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಾಲ್ಕಿ ಪಟ್ಟಣದಲ್ಲಿರುವ ಅಕ್ಕಮಹಾದೇವಿ ಮಹಿಳಾ ಪದವಿಪೂರ್ವ ಕಾಲೇಜು ಈಗ ನಡೆಯುತ್ತಿರುವ ನಿವೇಶನ ಹಾಗೂ ಕಟ್ಟಡ ಸರ್ಕಾರದ್ದಾಗಿದ್ದು, ಇದನ್ನು ಆರೋಗ್ಯ ಇಲಾಖೆಗೆ 100 ಹಾಸಿಗೆಗಳ ಆಸ್ಪತ್ರೆ ಕಟ್ಟಲು ನೀಡಿದ ವಿಷಯ ಸರ್ಕಾರದ ಗಮನದಲ್ಲಿದೆಯೇ? ಬಂದಿದ್ದರೇ ಇದನ್ನು ಇನ್ನು ಏಕೆ ಖಾಲಿ ಮಾಡಿಸಲ್ಲಿಲ್ಲ?

ಆ) ಈ ನಿವೇಶನವನ್ನು ಖಾಲಿ ಮಾಡಿಸದಿದ್ದಲ್ಲಿ, ಆಸ್ಪತ್ರೆ ಕಟ್ಟಲು ಅನಾನುಕೂಲವಾಗುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದರೇ, ಇದುವರೆವಿಗೂ ಖಾಲಿ ಮಾಡಲು ಕ್ರಮಕೈಗೊಳ್ಳದಿರಲು ಕಾರಣವೇನು? ಯಾವಾಗ ಖಾಲಿ ಮಾಡಲಾಗುವುದು?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಹೌದು

ಆಸ್ಪತ್ರೆ ಅಭಿವೃದ್ಧಿಗೆ ಅಗತ್ಯವಿರುವ ಒಟ್ಟು 5904.72 ಚದರ ಮೀಟರ್ ವಿಸ್ತೀರ್ಣದ ಜಮೀನನ್ನು ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೀದರ್ ಇವರು ದಿನಾಂಕ 11-9-2000ರಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ. ಬೀದರ್ ಇವರಿಗೆ ಲಿಖಿತ ಮೂಲಕ ಹಸ್ತಾಂತರಿಸಿರುತ್ತಾರೆ. ಈ ವಿಸ್ತೀರ್ಣದ ಒಂದು ಭಾಗದಲ್ಲಿ ಶ್ರೀ ಶಾಂತಿ ವರ್ಧಕ ಶಿಕ್ಷಣ ಸಂಸ್ಥೆಯು ಪದವಿಪೂರ್ವ ಕಾಲೇಜು ನಡೆಸುತ್ತಿದ್ದು, ಇದುವರೆವಿಗೂ ಆಸ್ಪತ್ರೆ ಕಟ್ಟಡಕ್ಕೆ ಅಗತ್ಯವಿರುವ ಜಮೀನನ್ನು ಔತಿಕವಾಗಿ ತೆರವುಗೊಳಿಸಿಕೊಟ್ಟಿರುವುದಿಲ್ಲ. ಈ ಬಗ್ಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ, ಬೀದರ್ ಇವರು ಹಲವು ಸೂಚನಾ ಪತ್ರಗಳನ್ನು ಸದರಿ ಸಂಸ್ಥೆಗೆ ನೀಡಿರುತ್ತಾರೆ. ಈ ತಮ್ಮಧ್ಯೆ ಶ್ರೀ ಶಾಂತಿ ವರ್ಧಕ ವಿದ್ಯಾ ಸಂಸ್ಥೆಯು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ಸಂಖ್ಯೆ 27753/2002 ಮತ್ತು ರಿಟ್ ಪಿಟಿಷನ್ ಸಂಖ್ಯೆ 29753/2002ಗಳನ್ನು ಸಲ್ಲಿಸಿದ್ದು, ಘನ ನ್ಯಾಯಾಲಯವು ತಡೆ ಆದೇಶವನ್ನು ನೀಡಿದ್ದು, ಮುಂದುವರೆಸಿದೆ. ಆದ್ದರಿಂದ ಸದರಿ ನಿವೇಶನವನ್ನು ಖಾಲಿ ಮಾಡಿಸಲು ಸಾಧ್ಯವಾಗಿಲ್ಲ.

ಆ) ಹೌದು

ಕರ್ನಾಟಕ ಉಚ್ಚ ನ್ಯಾಯಾಲಯದ ತಡೆಯಾಜ್ಞೆ ತೆರವಾದ ಮೇಲೆ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಗ್ರಾಮೀಣಾಭಿವೃದ್ಧಿಗೆ ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಬಂದಿರುವ ಹಣ.

1227 (1436) ಶ್ರೀ ಕೃಷ್ಣಪ್ಪ ವಿ (ದೊಡ್ಡಬಳ್ಳಾಪುರ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ 3 ವರ್ಷಗಳಿಂದ ಗ್ರಾಮೀಣಾಭಿವೃದ್ಧಿಗೆ ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಬಿಡುಗಡೆಯಾಗಿರುವ ಹಣವೆಷ್ಟು?